# ಪೋಷಕರ ಪ್ರೋತ್ಸಾಹ ಕಲೆಗೂ ಇರಲಿ

## ಶರ್ಮಿಳಾ

ಝೀ ಕನ್ನಡದ 'ಪತ್ತೆದಾರಿ ಪ್ರತಿಭಾ'ದ ಪ್ರತಿಭಾ



★ *ಅಂತಹ ಪತ್ತೆದಾರಿಕೆ ಪ್ರತಿಭೆ ಏನಿದೆ?*

ಮನೆ ಮನೆಯಲ್ಲಿಯೂ ಪ್ರತಿಭಾನ್ವಿತ ಗೃಹಿಣಿಯರು ಇರುತ್ತಾರೆ. ಸಾಮಾನ್ಯವಾಗಿ ಅವರಿಗೆ ಪ್ರತಿ ವಿಷಯದಲ್ಲಿಯೂ ಕುತೂಹಲ ಇರುತ್ತದೆ. ಆಕೆ ಶಂಕಿಸುತ್ತಾಳೆ, ಸಂದೇಹಿಸುತ್ತಾಳೆ, ಸತ್ಯವನ್ನು ಹುಡುಕಲು ತವಕಿಸುತ್ತಾಳೆ. ಚಿಕ್ಕ ಪುಟ್ಟ ಸಂಗತಿಗಳನ್ನೂ ಗಂಭೀರವಾಗಿ ಪರೀಕ್ಷಿಸುತ್ತಾಳೆ. ಆದರೆ ಆಕೆಯ ಆ ನೋಟಕ್ಕೆ ಒಂದು ಪ್ರಶಂಸೆಯನ್ನು ಪಡೆಯುವ ಸಣ್ಣ ಪಯತ್ನದ ಹಾದಿ ಇಲ್ಲಿನ ಪತ್ತೆದಾರಿಕೆ ಎಂದು ನಾನು ಭಾವಿಸಿದ್ದೇನೆ. ಕುಟುಂಬವನ್ನು ಕಟ್ಟುವ ಒಬ್ಬ ಗೃಹಿಣಿಯ ಪ್ರತಿಭಾನ್ವೇಷಣೆಗೆ ಇಲ್ಲಿ ಸಣ್ಣ ಪ್ರಯತ್ನ ಮಾಡಲಾಗುತ್ತಿದೆ. ಒಂದು ರೀತಿಯಲ್ಲಿ ಪ್ರತಿ ಮನೆಯಲ್ಲಿರುವ ಗೃಹಿಣಿಯ ಕಥೆಯೇ 'ಪತ್ತೆದಾರಿ ಪ್ರತಿಭಾ' ಎಂದು ನಾನು ಭಾವಿಸುತ್ತೇನೆ.

★ *ಹೊಸ ಹಾದಿ ತುಳಿದಿದ್ದು ಹೇಗೆ?*

ನಟಿ ಆಗುವ ಯೋಚನೆಯೂ ಇರಲಿಲ್ಲ. ಶಾಸ್ತ್ರೀಯ ನೃತ್ಯದ ವಿದ್ಯಾರ್ಥಿನಿ ಆದ ನಾನು ಅನೇಕ ಕಾರ್ಯಕ್ರಮಗಳನ್ನು ನೀಡಿದ್ದೇನೆ. ಬಿಇ ಮುಗಿದ ನಂತರ ಉದ್ಯೋಗದ ಬಗ್ಗೆ ಯೋಚಿಸಲೇ ಇಲ್ಲ. ಆಕಸ್ಮಿಕವಾಗಿ ನಟನೆಯಲ್ಲಿ ತುಂಬಾ ಬ್ಯುಸಿ ಆದೆ. ಕನ್ನಡ– ತೆಲುಗಿನ ಧಾರಾವಾಹಿಗಳಲ್ಲಿ ನಾಯಕಿ ಪಾತ್ರವನ್ನೇ ನಿರ್ವಹಿಸುತ್ತಿದ್ದೇನೆ. ಬೇರೆ ಇನ್ನೇನು ಮಾಡಬೇಕು ಎನ್ನುವ ಬಗ್ಗೆ ಯೋಚನೆ ಮಾಡಿಲ್ಲ. ನಟನೆ ಬದುಕು– ನಾಟ್ಯ ನನ್ನ ಉಸಿರಾಗಿದೆ.

★ *ಹೇಗೆ ನಾಟ್ಯವನ್ನು ಕಲಿತಿದ್ದು?*

ಬಹುಶಃ ನಾನಾಗ ಮೂರು– ನಾಲ್ಕು ವರ್ಷದ ಮಗು. ಆಗಲೇ ಸ್ವಯಂ ಆಸಕ್ತಿಯಿಂದ ನೃತ್ಯಕ್ಕೆ ಸೇರಲು ಬಯಸಿದೆ. ಅದರಂತೆ ನನ್ನ ತಂದೆ ಚಂದ್ರಶೇಖರ್, ತಾಯಿ ಶ್ರೀದೇವಿ ಬೆಂಬಲಿಸಿದರು. ನಮ್ಮದು ದೊಡ್ಡ ಕುಟುಂಬ. ನಾನೇ ಮುದ್ದು ಮನೆಮಗಳಾಗಿದ್ದರಿಂದ ನನ್ನಿಷ್ಟದಂತೆ ಬೆಳೆಯಲು ಸಾಧ್ಯವಾಯಿತು. ನನಗೆ ಡಾನ್ಸ್ ಬಿಟ್ಟರೆ ಬೇರೆ ಏನೂ ಗೊತ್ತಿಲ್ಲ ಎನ್ನುವಂತೆ ಅದನ್ನು ಮೈಗೂಡಿಸಿಕೊಂಡೆ. ಅಷ್ಟೇ ನಿಷ್ಠೆಯಿಂದ ಅಭ್ಯಾಸ ಮಾಡಿದೆ. ಐದು ವರ್ಷ ತುಂಬುವಷ್ಟರಲ್ಲಿ ಸಾರ್ವಜನಿಕ ಕಾರ್ಯಕ್ರಮ ನೀಡಲು ಶುರುಮಾಡಿದೆ. ನಾನು ಕೂಚಿಪುಡಿ ನೃತ್ಯಪಟು ಪ್ರಪಂಚವನ್ನೆಲ್ಲಾ ಸುತ್ತಿ ಅಸಂಖ್ಯ ಕಾರ್ಯಕ್ರಮ ನೀಡಿದ್ದೇನೆ.

★ *ನೃತ್ಯವನ್ನೇ ವೃತ್ತಿಯಾಗಿ ಏಕೆ ತೆಗೆದುಕೊಳ್ಳಲಿಲ್ಲ?*

ವಿಶ್ವವಿದ್ಯಾಲಯದ ಮಟ್ಟಕ್ಕೆ ನೃತ್ಯಶಾಲೆಯನ್ನು ಕಟ್ಟಬೇಕು ಎನ್ನುವುದು ನನ್ನ ಕನಸು. ಆ ನಿಟ್ಟಿನಲ್ಲಿ ಪಯತ್ನವನ್ನು ಮಾಡಿಲ್ಲ. ನಮಗೆ ಪಾರಂಪರಿಕ ಶಿಕ್ಷಣಕ್ಕಿಂತ ಅಂಕಪಟ್ಟಿ ಪಡೆಯುವ ಪದವಿಗಳೇ ಪ್ರಧಾನ ಆಕರ್ಷಣೆ ಆಗಿವೆ. ಬಹುತೇಕರಿಗೆ ನೃತ್ಯಾಭ್ಯಾಸಕ್ಕೆ ಒಳ್ಳೆಯ ಪ್ರೋತ್ಸಾಹ ಸಿಗುವುದಿಲ್ಲ. ಓದಿನ ಒತ್ತಡವೇ ಹೆಚ್ಚಾಗುತ್ತದೆ. ನನ್ನಂತಹ ಪೋಷಕರು ಎಲ್ಲರಿಗೂ ಸಿಗುತ್ತಾರೆ ಎನ್ನಲು ಆಗುವುದಿಲ್ಲ. ಓದಿನ ಬಗ್ಗೆ ಹೆಚ್ಚು ಒತ್ತಡವನ್ನು ನನ್ನ ಪೋಷಕರು ಹಾಕಲಿಲ್ಲ. ಡಿಗ್ರಿ ಅಂದರೆ ಯಾವುದಾದರೂ ಒಂದು ಎಂದರು. ನಾನು ಬಿಇ ಮಾಡಿದೆ.

★ *ನೃತ್ಯಾಭ್ಯಾಸ ನಿಮ್ಮ ಅಧ್ಯಯನಕ್ಕೆ ಅಡ್ಡಿ ಆಗಲಿಲ್ಲವೇ?*

ಇಲ್ಲ. ನನಗೊಬ್ಬಳಿಗೆ ಅಲ್ಲ. ನಮ್ಮ ನೃತ್ಯ ಶಾಲೆಯಲ್ಲಿ ಬಹುತೇಕರಿಗೆ ಅದು ಸಮಸ್ಯೆ ಆಗಲಿಲ್ಲ. ಹಾಗೆ ನೋಡಿದರೆ ಕಲಾಭ್ಯಾಸ ಕೇವಲ ದೈಹಿಕ ಕಸರತ್ತು ಅಲ್ಲ. ಮೆದುಳನ್ನೂ ಚೆನ್ನಾಗಿ ದುಡಿಸುತ್ತದೆ. ನೃತ್ಯದಲ್ಲಿ ತಾಳ ಲಯಗಳನ್ನು ನೆನಪಿನಲ್ಲಿ ಇಟ್ಟುಕೊಳ್ಳಬೇಕು. ಬಹುತೇಕ ಎಲ್ಲಾ ಕಲಾಭ್ಯಾಸ ಮಾಡುವ ವಿದ್ಯಾರ್ಥಿಗಳಿಗೆ ಸ್ಮರಣ ಶಕ್ತಿ ಸ್ವಲ್ಪ ಹೆಚ್ಚಿರುತ್ತದೆ. ಓದಿನ ಜೊತೆಗೆ ಕ್ರೀಡೆ, ಕಲೆ, ಸಂಗೀತ, ನೃತ್ಯ ಹೀಗೆ ಯಾವುದೇ ಒಂದು ಕ್ಷೇತ್ರದಲ್ಲಿ ತೊಡಗುವುದರಿಂದ ಪಠ್ಯಪುಸ್ತಕಗಳ ಓದೂ ಸುಲಭ ಆಗುತ್ತದೆ ಎನ್ನುವುದು ನನ್ನ ಅಭಿಪ್ರಾಯ.

■ ರಾಗು